ಗೋವಿಂದ, 'ಆಗಲೇ ಹೇಳಿದನಲ್ಲಯ್ಯ, ಎಲ್ಲ ಮುಗಿದ ಕಥೆ, ಅದಿರಲಿ, ಲೇ ಶೀನಿ ನಾನು ಬಂದ ಹೊತ್ತಿನಿಂದ ನೀನು ಬರಿದೇ ಮಾತನಾಡುತ್ತಲೇ ಇದ್ದೀಯಾ. ನಾದಿನಿ ಮೇರಿಯನ್ನು ನೋಡು, ಸುಸ್ತುಬಿದ್ದು ಮನೆಮೆಟ್ಟಿಲು ದಾಟುತ್ತಿದ್ದಂತೆಯೇ ಬಾಯಾರಿದ್ದ ನನಗೆ ಒಂದು ಲೋಟ ಜೀವಾಮೃತ ಕೊಟ್ಟಳು, ಅನ್ನವಿಟ್ಟಳು. ರಿಯಲ್ ಎಸ್ಟೇಟಿನ ನಿನಗೆ, ಸುಳ್ಳನ್ನೇ ಸತ್ಯ ಮಾಡುತ್ತಿದ್ದ ಅಪ್ಪನಿಗೂ, ಜಾತಕವನ್ನೇ ನಂಬಿರುವ ನನಗೂ ಇದೆಲ್ಲ ಹೇಗೆ ಗೊತ್ತಾಗಬೇಕು' ಎಂದು ನಕ್ಕು, ಊರಿಗೆ ಬರುವಾಗ ರಾಜಿ, ಮೇರಿ, ಮಕ್ಕಳನ್ನೂ ಕರೆದುಕೊಂಡು ಬಾ. ವರ್ಷಂಪ್ರತಿ ನಡೆಯುವ ಅನ್ನ ಸಂತರ್ಪಣೆ ಈ ಸಲ ನಿನ್ನಿಂದಲೇ ಆಗಲಿ. ರಾಜಿಯದೇ ಅಡುಗೆ ಮೇಲ್ವಿಚಾರಣೆ. ಮೇರಿಯೇ ಪಾಯಸ ಬಡಿಸಲಿ. ಅವರು ಬೆರಳಲ್ಲಿ ಸೂಚಿಸಿದ್ದನ್ನು ನಾವು ತಲೆಯಲ್ಲಿ ಹೊತ್ತು ಮಾಡುವ. ಆಗಲಾದರೂ ನಮ್ಮ ಜೀವನ ಜಾತಕಗಳ ಪಾಪ ಕಳೆಯಲಿ. ಇಷ್ಟೆಲ್ಲ ಯಾತ್ರೆ ಮಾಡಿದ ಮೇಲೆ ಕೈಯ್ಯ ಪಂಚಾಂಗದ ಹಾಳೆಗಳಿಗಿಂತ ಅಂತರಂಗದ ಪಂಚಾಂಗವೇ ದೊಡ್ಡದು ಅಂತ ಅನ್ನಿಸಿದೆ,' ಎಂದು ಎದ್ದ.

ಊರತ್ತ ಹೊರಟವನಿಗೆ ಮೇರಿ, ರಾಜಿ ತಂದಿದ್ದ ಸಿಹಿ ತಿಂಡಿಯ ಬಾಕ್ಸ್ ನೀಡುತ್ತಾ, 'ಭಾವ ತೆಗೆದುಕೊಳ್ಳಿ, ಮನೆಯವರಿಗೆ,' ಎಂದಳು. 'ಯಾತ್ರೆಗೆಂದು ಹೋಗಿ ದುಡ್ಡು ಖರ್ಚಾಗಿ, ಖಾಲಿ ಕೈಯ್ಯಲ್ಲಿ ಮನೆಗೆ ಹೋಗುವುದಕ್ಕಿಂತ ಈ ಸಿಹಿ ಒಯ್ಯುವುದು ಒಳ್ಳೆಯದೇ. ಅರೇ, ಬಾಕ್ಸ್ ಮೇಲೆ ಕೃಷ್ಣ, ರಾಧೆಯೊಂದಿಗೆ ಕೊಳಲೂದುವ ಫೋಟೊ ಬೇರೆ ಇದೆ', ಎಂದು ಅದಕ್ಕೇ ಒಂದು ನಮಸ್ಕಾರ ಹಾಕಿ ಹೆಗಲ ಚೀಲದೊಳಗೆ ಇಳಿಸಿಕೊಂಡು ನಿಧಾನವಾಗಿ ಕುಂಟುತ್ತಾ ಮೆಟ್ಟಿಲು ಇಳಿದು ಹೊರಟ ಗೋವಿಂದಾಚಾರ್ಯ.


**ಕೆ. ಅರವಿಂದ ಮಿತ್ರ**

ಕತೆಗಾರರು ಮೈಸೂರಿನವರು. ಇಂಗ್ಲಿಷ್ ಹಾಗೂ ವಿದೇಶಿ ಭಾಷೆ ವಿಶ್ವವಿದ್ಯಾಲಯ ಮತ್ತು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನದಲ್ಲಿ ಕ್ರಮವಾಗಿ ಎಂ.ಎ ಹಾಗೂ ಎಂ.ಫಿಲ್ ಪದವಿಗಳನ್ನು ಪಡೆದಿದ್ದಾರೆ. ಪ್ರಸ್ತುತ ನಾಪೋಕ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಗ್ಲಿಷ್ ಭಾಷೆಯ ಅಧ್ಯಾಪಕರಾಗಿದ್ದಾರೆ.